ಓ.ಎಸ್. ನಂ. 149/2016

ಪಿ.ಡಬ್ಲ್ಯು: 02 (ರೇವಣಸಿದ್ದಪ್ಪ)

ದಿನಾಂಕ: 20.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ DGB ವಕೀಲರಿಂದ.

ದಾವೆಯನ್ನು ಬಸಪ್ಪ ಹೂಡಿರುತ್ತಾರೆ. ಯಾರ ವಿರುದ್ಧ ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಜಾಗಟಗೆರೆಯವರ ಮೇಲೆ ಹೂಡಿರುತ್ತಾರೆ. ಸರ್ವೆ ನಂಬರ್ 34ಎ ಗೆ ದಾವೆ ಹೂಡಿರುತ್ತಾರೆ. ಸದರಿ ಆಸ್ತಿ ವಿಸ್ತೀರ್ಣ 2.34 ಎಕರೆ ಇದೆ. ಸದರಿ ಆಸ್ತಿ ರಾಮಪುರದ ಬಳಿ ಇದೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನಮ್ಮ ಜಮೀನು ಇಲ್ಲ, ನಾವು ಕೂಲಿಗೆ ಹೋಗುವಾಗ ನೋಡಿರುತ್ತೇವೆ. ದಾವಾ ಆಸ್ತಿಯ ಪೂರ್ವಕ್ಕೆ ಮಲ್ಲಮ್ಮ, ಕರಿಯಪ್ಪ ಅವರ ಜಮೀನು, ಪಶ್ಚಿಮಕ್ಕೆ ನಾಗಮ್ಮ ಅವರ ಹೊಲ, ಉತ್ತರಕ್ಕೆ ಚನ್ನಬಸಪ್ಪ ಅವರ ಜಮೀನು, ದಕ್ಷಿಣಕ್ಕೆ ಕರಿಯಮ್ಮ ಅವರ ಜಮೀನು ಇದೆ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಸಾಕ್ಷಿ ಮುಂದುವರೆದು ವಾದಿ ಹೇಳಿ ಬರೆಸಿರುತ್ತಾರೆ, ನಾನು ಓದಿ ಹೇಳಿದಾಗ ನಾನು ಹೌದು ಎಂದು ಹೇಳಿರುತ್ತೇನೆ.

ವಾದಿಯ ಒಡಹುಟ್ಟಿದವರು 7 ಜನ ಇದ್ದಾರೆ, ಅವರ ಮಧ್ಯ ಪಾಲು ವಿಭಾಗದ ಸಮಯದಲ್ಲಿ ನಾನು ಇದ್ದೆ. ಆದರೆ ಯಾರಿಗೆ ಯಾವ ಸರ್ವೆ ನಂಬರ್ ಬಂದಿದೆ ಎಂದು ನನಗೆ ಹೇಳಲಾಗುವುದಿಲ್ಲ. ಆ ಭಾಗ ಬರವಣಿಗೆ ರೂಪದಲ್ಲಿ ಆಗಿರುವುದಿಲ್ಲ. ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ. ಪ್ರತಿವಾದಿಯ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ ವಿಚಾರ ನನಗೆ ಗೊತ್ತೆ ಎಂದರೆ ಆತ ಖರೀದಿ ಮಾಡಿರುವುದಿಲ್ಲ. ದಾವಾ ಆಸ್ತಿಯ ದಾಖಲಾತಿಗಳು ಈಗ ವಾದಿಯ ಹೆಸರಿನಲ್ಲಿವೆ. ವಾದಿಯ ಪರವಾಗಿ ಈಗ ದಾವೆಯನ್ನು ಅಧಿಕಾರ ಪತ್ರ ವಹಿಸಿಕೊಂಡಿರುವವರು ನಡೆಸುತ್ತಿದ್ದಾರೆ. ಸದರಿ ಜಿಪಿಎ ವಿಜಯಕುಮಾರ್ ಮತ್ತು ನಾನು ಆತ್ಮೀಯರು ಎಂದರೆ ನನಗೆ ಗೊತ್ತಿಲ್ಲ. ಈ ಕೇಸಲ್ಲದೆ ಬೇರೆ ಕೇಸಿನಲ್ಲಿಯೂ ಸಹ ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಹೌದು. ನನಗೆ ಈ ದಾವೆಯ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಯಾವ ಬಣ್ಣ ಇದೆ ಎಂದರೆ ಮಬ್ಬು ಬಣ್ಣ ಇದೆ. ದಾವಾ ಆಸ್ತಿಯನ್ನು ನಾನು ನೋಡಿರುವುದಿಲ್ಲ, ಯಾರು ಈಗ ಅದರಲ್ಲಿ ಸ್ವಾಧೀನ ಇದ್ದಾರೆ ಎಂದು ಗೊತ್ತಿಲ್ಲದಿದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.